# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಕೆ ಅಬ್ದುಲ್ ಜಬ್ಬರ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 240**

**ಉತ್ತರಿಸಬೇಕಾದ ದಿನಾಂಕ : 18-08-2026**

**ಉತ್ತರಿಸಬೇಕಾದ ಸಚಿವರು : ಮಾನ್ಯ ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಹಕಾರ ಬ್ಯಾಂಕ್‌ಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡಲಾಗುತ್ತಿರುವ ಕೃಷಿ ಸಾಲಗಳು ಸಮಯಕ್ಕೆ ಸರಿಯಾಗಿ ದೊರೆಯುತ್ತಿವೆಯೇ; (ಸಂಪೂರ್ಣ ಮಾಹಿತಿ ಒದಗಿಸುವುದು); | ರಾಜ್ಯದ ಸಹಕಾರ ಬ್ಯಾಂಕ್‌ಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಗೆ ನೀಡಲಾಗುತ್ತಿರುವ ಕೃಷಿ ಸಾಲಗಳು ರೈತರು ಅರ್ಜಿ ಸಲ್ಲಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ ಮಂಜೂರು ಮಾಡಲಾಗುತ್ತಿದೆ.<br><br>ನಬಾರ್ಡ್ ಪುನರ್ಧನದ ಪ್ರಮಾಣ ಮತ್ತು ಡಿಸಿಸಿ ಬ್ಯಾಂಕುಗಳಲ್ಲಿನ ಬಂಡವಾಳವನ್ನು ಆಧರಿಸಿ ಡಿಸಿಸಿ ಬ್ಯಾಂಕುಗಳಿಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಹೊಸ ಸಾಲದ ಮಿತಿಯನ್ನು ಹಂತ ಹಂತವಾಗಿ ಮಂಜೂರು ಮಾಡಲಾಗುತ್ತಿದೆ. ಇದರ ಆಧಾರದ ಮೇಲೆ ಸಂಘಗಳು ರೈತರಿಂದ ಅರ್ಜಿಯನ್ನು ಪಡೆದು ಡಿಸಿಸಿ ಬ್ಯಾಂಕುಗಳಿಗೆ ಸಲ್ಲಿಸಲಾಗುತ್ತದೆ.<br><br>ನಬಾರ್ಡ್ ರಿಯಾಯಿತಿ ಬಡ್ಡಿ ದರದ ಸಾಲದ ಮಿತಿ 2023-24ನೇ ಸಾಲಿನಲ್ಲಿ ರೂ.5600 ಕೋಟಿಗಳಿದ್ದು, 2024-25ನೇ ಸಾಲಿನಲ್ಲಿ ರೂ.3236.11 ಕೋಟಿ ಮತ್ತು 2025-26ನೇ ಸಾಲಿನಲ್ಲಿ ರೂ3565.00 ಕೋಟಿಗಳಿಗೆ ರಿಯಾಯಿತಿ ಬಡ್ಡಿ ದರದ ಸಾಲದ ಮಿತಿ ನೀಡಿದ್ದು, ರಿಯಾಯಿತಿ ಬಡ್ಡಿ ದರದ ಹೊರತಾಗಿಯೂ ಸಹ ರೈತರು ಇತರೇ ಸಾಲದ ಅಡಿಯಲ್ಲಿ ಸಾಧಾರಣ ಬಡ್ಡಿ ದರದಲ್ಲಿ ಅರ್ಜಿ ಸಲ್ಲಿಸಿ ಸಾಲ ಪಡೆಯಲು ಅವಕಾಶ ಇರುತ್ತದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಎಷ್ಟು ರೈತರು ಕೃಷಿ ಸಾಲಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ; ಎಷ್ಟು ರೈತರಿಗೆ ಸಾಲ ಮಂಜೂರಾಗಿದೆ ಹಾಗೂ ಎಷ್ಟು ಅರ್ಜಿಗಳು ತಿರಸ್ಕೃತವಾಗಿವೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | 2023-24ನೇ ಸಾಲಿನಲ್ಲಿ 1,23,561 ರೈತರು, 2024-25 ನೇ ಸಾಲಿನಲ್ಲಿ 76,542 ರೈತರು ಮತ್ತು 2025-26 ನೇ ಸಾಲಿನಲ್ಲಿ 78,028 ಹೊಸ ರೈತರಿಗೆ ಸಹಕಾರ ಸಂಘಗಳು ಡಿಸಿಸಿ ಬ್ಯಾಂಕುಗಳ ಲಭ್ಯ ಬಂಡವಾಳವನ್ನು ಆಧರಿಸಿ ಹಂತ ಹಂತವಾಗಿ ಅರ್ಜಿ ಪಡೆದು ಸಾಲ ವಿತರಿಸಿರುತ್ತವೆ. ತಾಂತ್ರಿಕ ಸಮಸ್ಯೆಯಿಂದಾಗಿ ಸಾಲದ ಯಾವುದೇ ಅರ್ಜಿಗಳನ್ನು ತಿರಸ್ಕರಿಸಿರುವುದಿಲ್ಲ. |

| | | |
|---|---|---|
| | | ಚಿಕ್ಕಮಗಳೂರು, ಕಲಬುರ್ಗಿ ಡಿಸಿಸಿ ಬ್ಯಾಂಕಿನಲ್ಲಿ ಹೆಚ್ಚಿನ ಸ್ವಂತ ಬಂಡವಾಳ ಇಲ್ಲದಿರುವುದರಿಂದ ಹೊಸ ಸದಸ್ಯರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ವಿತರಿಸಿರುವುದಿಲ್ಲ.<br><br>ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ) | ಸಾಲ ವಿತರಣೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಾಲ ವಿತರಣೆ ಮತ್ತು ತಾಂತ್ರಿಕ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು) | ಡಿಸಿಸಿ ಬ್ಯಾಂಕುಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಅನುಮೋದನೆಗೊಂಡು ಸ್ವೀಕೃತವಾದ ಸಾಲದ ಅರ್ಜಿಗಳನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಿ ನಿಯಮಾನುಸಾರ ಪರಿಶೀಲಿಸಿ ಸಾಲ ಮಂಜೂರಿಗೆ ಕ್ರಮವಿಡಲಾಗುತ್ತಿದೆ.<br><br>ರೈತರಿಗೆ ಸಾಲ ವಿತರಣೆಯಲ್ಲಿ ತಾರತಮ್ಯವಾಗಬಾರದೆಂಬ ಉದ್ದೇಶದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ಶೇ.24.10 ರಷ್ಟು ಸಾಲ ನೀಡಲು ದಿನಾಂಕ:14-06-2024 ರಂದು ಹಾಗೂ ಹೊಸ ಸದಸ್ಯರಿಗೆ ಕನಿಷ್ಟ ಶೇ.10 ರಷ್ಟು ಸಾಲವನ್ನು ವಿತರಿಸಲು ಹಾಗೂ ಯಾವುದೇ ಸಂಘಕ್ಕೆ ಅಥವಾ ತಾಲ್ಲೂಕಿಗೆ ತಾರತಮ್ಯ ಮಾಡದೇ ಸಾಲದ ಮಿತಿಯನ್ನು ಪ್ರತೀ ಸಂಘಕ್ಕೆ ಹಂಚಿಕೆ ಮಾಡಿ ಅದರನ್ವಯ ಎನ್‌ಸಿಎಲ್ ಮತ್ತು ಸಾಲದ ಅರ್ಜಿಗಳನ್ನು ಒಂದೇ ಬಾರಿ ಡಿಸಿಸಿ ಬ್ಯಾಂಕುಗಳು ಪಡೆದು ಸಾಲ ವಿತರಿಸಲು ಹಾಗೂ ಸಂಘದಲ್ಲಿ ರೈತರು ಸಲ್ಲಿಸಿದ ಅರ್ಜಿಗಳ ವಿವರವನ್ನು ಕಡ್ಡಾಯವಾಗಿ ಅರ್ಜಿ ವಿಲೇವಾರಿ ರಿಜಿಸ್ಟರ್‌ನಲ್ಲಿ ದಾಖಲಿಸಲು ದಿನಾಂಕ:13-03-2026 ರಂದು ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 30(ಬಿ) ರಡಿ ನಿರ್ದೇಶನ ನೀಡಲಾಗಿದೆ. |

**ಸಂಖ್ಯೆ:ಸಿಒ 243 ಸಿಎಲ್‌ಎಸ್ 2026**

**(ಲಕ್ಷ್ಮಣ ಎಸ್.ಸವದಿ)**
**ಸಹಕಾರ ಸಚಿವರು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ ಅಬ್ದುಲ್ ಜಬ್ಬಾರ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) ಅವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 240 ಗೆ ಅನುಬಂಧ.

**ಕಳೆದ ಮೂರು ವರ್ಷಗಳಲ್ಲಿ ರೈತರು ಕೃಷಿ ಸಾಲಕ್ಕಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ಡಿಸಿಸಿ ಬ್ಯಾಂಕುಗಳಿಗೆ ಹೊಸದಾಗಿ ಸಾಲ ಪಡೆಯಲು ರೈತರು ಅರ್ಜಿ ಸಲ್ಲಿಸಿ ಸಾಲ ಪಡೆದ ವಿವರ**

| ಕ್ರ. ಸಂ | ಜಿಲ್ಲೆಯ ಹೆಸರು | 2023-24 | 2024-25 | 2025-26 |
|---|---|---|---|---|
| 1 | ಬೆಳಗಾವಿ | 15206 | 19604 | 5636 |
| 2 | ವಿಜಯಪೂರ | 18513 | 12198 | 11550 |
| 3 | ಬಾಗಲಕೋಟೆ | 12268 | 4520 | 8125 |
| 4 | ಧಾರವಾಡ | 428 | 8 | 199 |
| 5 | ಗದಗ | 215 | 0 | 530 |
| 6 | ಹಾವೇರಿ | 436 | 42 | 1207 |
| 7 | ಉತ್ತರ ಕನ್ನಡ | 4267 | 4261 | 3445 |
| 8 | ಬೀದರ್A | 3778 | 294 | 864 |
| 9 | ಕಲಬುರಗಿ | 0 | 0 | 0 |
| 10 | ಯಾದಗಿರಿ | 0 | 0 | 0 |
| 11 | ರಾಯಚೂರು | 2476 | 2691 | 2321 |
| 12 | ಕೊಪ್ಪಳ | 2367 | 1304 | 2357 |
| 13 | ಬಳ್ಳಾರಿ | 1211 | 645 | 37 |
| 14 | ವಿಜಯನಗರ | 1285 | 885 | 32 |
| 15 | ಬೆಂ ನಗರ | 1026 | 0 | 662 |
| 16 | ಬೆಂ ಗ್ರಾಮಾಂತರ | 4686 | 0 | 2971 |
| 17 | ಬೆಂ ದಕ್ಷಿಣ | 11428 | 0 | 7909 |
| 18 | ಕೋಲಾರ | 2494 | 517 | 34 |
| 19 | ಚಿಕ್ಕಬಳ್ಳಾಪುರ | 2306 | 739 | 8 |
| 20 | ತುಮಕೂರು | 2852 | 1655 | 1351 |
| 21 | ಚಿತ್ರದುರ್ಗ | 3836 | 2118 | 2252 |
| 22 | ದಾವಣಗೆರೆ | 3294 | 4715 | 3900 |
| 23 | ಶಿವಮೊಗ್ಗ | 3691 | 1076 | 5713 |
| 24 | ಮೈಸೂರು | 3632 | 610 | 2132 |
| 25 | ಚಾಮರಾಜನಗರ | 2574 | 161 | 289 |
| 26 | ಮಂಡ್ಯ | 4330 | 3795 | 2132 |
| 27 | ಹಾಸನ | 1984 | 4912 | 4869 |
| 28 | ಚಿಕ್ಕಮಗಳೂರು | 0 | 0 | 0 |

| | | | | |
|---|---|---|---|---|
| 29 | ಕೊಡಗು | 1951 | 1953 | 1295 |
| 30 | ದಕ್ಷಿಣ ಕನ್ನಡ | 7059 | 5302 | 4656 |
| 31 | ಉಡುಪಿ | 3968 | 2537 | 1552 |
| | ಒಟ್ಟು | 123561 | 76542 | 78028 |

ಸಹಕಾರ ಸಂಘಗಳ ಉಪ ನಿಬಂಧಕರು(ಪತ್ತು)

17/8/26